ಅರಣ್ಯ ಪ್ರದೇಶದಲ್ಲಿ ಸದ್ಯ ಯಾವುದೇ ಅಕ್ರಮ ಗಣಿಗಾರಿಕೆ ನಡೆದಿರುವುದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿರುತ್ತಾರೆ. ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಲ್ಲಿ, ತನಿಖೆ ನಡೆಸಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಆ. ಜಮಖಂಡಿ ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಯು ಕ್ರಮ ಕೈಗೊಳ್ಳುವುದು. ದಿನಾಂಕ:20.6.2006ರಂದು ನಡೆದ ಟಾಸ್ಕ್ ಫೋರ್ಸ್ ಸಮಿತಿಯ ಸಭೆಯಲ್ಲಿ ಅರಣ್ಯ ಪ್ರದೇಶದಲ್ಲಿ ಸದ್ಯ ಯಾವುದೇ ಅಕ್ರಮ ಗಣಿಗಾರಿಕೆ ನಡೆದಿರುವುದಿಲ್ಲ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿರುತ್ತಾರೆ. ಆದ್ದರಿಂದ ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಆದಾಯ ನಷ್ಟವಾಗಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನಿನ ರೀತ್ಯ ಕ್ರಮ ಕೈಗೊಳ್ಳಲಾಗುವುದು.

ಇ) ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆಗಾಗಿ ಅನುಮತಿ ನೀಡಲು ಅರಣ್ಯ ಸಂರಕ್ಷಣೆ ಕಾಯ್ದೆ 1980ರ ಪ್ರಕಾರ ಕೇಂದ್ರ ಸರ್ಕಾರದ ಅರಣ್ಯ ಇಲಾಖೆಯ ಅನುಮೋದನೆಯ ಅವಶ್ಯಕತೆ ಇರುತ್ತದೆ.

467 (663) ಶ್ರೀ ಸಿದ್ದು ಸಾವದಿ (ಜಮಖಂಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಜಮಖಂಡಿ–ಸಾವಳಗಿ ಮಧ್ಯದಲ್ಲಿ ಜಂಬಗಿ ಬಿ.ಕೆ. ಗ್ರಾಮದ ಹತ್ತಿರ ಕೃಷ್ಣಾ ನದಿಗೆ ಸೇತುವೆ ನಿರ್ಮಿಸುವ ಬೇಡಿಕೆ ಶತಮಾನಗಳಿಂದಲೂ ಅತೀ ಅವಶ್ಯವಿದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಯಾವ ಯೋಜನೆ ಅಡಿ ಮತ್ತು ಯಾವಾಗ ಈ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು;

ಇ) ಇಷ್ಟೊಂದು ವೈಜ್ಞಾನಿಕವಾಗಿದ್ದ ಈ ಸೇತುವೆಯನ್ನು ಇಲ್ಲಿಯವರೆಗೆ ನಿರ್ಮಿಸದೇ ಇರಲು ಕಾರಣಗಳೇನು;

ಈ) ಈಗಾಗಲೇ ಅರ್ಜಿ ಸಲ್ಲಿಸಿದ್ದು ಇಲ್ಲಿಯವರೆಗೆ ಇದರ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಬಂದಿದೆ.

ಆ) ಮೊದಲು ಈ ಸೇತುವೆಯು ಜಮಖಂಡಿ ಸಾವಳಗಿ ಗ್ರಾಮೀಣ ರಸ್ತೆಯ ಮೇಲೆ ಇದ್ದುದರಿಂದ ಇದು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತಿತ್ತು. ಈ ರಸ್ತೆಯು ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿ ಇರಲಿಲ್ಲವಾದ್ದರಿಂದ ಇದನ್ನು ಇಲ್ಲಿಯವರೆಗೆ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲು ಕ್ರಮ ಕೈಗೊಂಡಿರಲಿಲ್ಲ. ಈಗ ಈ ರಸ್ತೆಯು ಸರ್ಕಾರದ ಆದೇಶ ಸಂಖ್ಯೆ: ಪಿಡಬ್ಲ್ಯುಡಿ 262 ಸಿಆರ್‌ಎಂ 2001 ದಿನಾಂಕ 24.9.2003 ರಲ್ಲಿ ಜಿಲ್ಲಾ ಮುಖ್ಯ ರಸ್ತೆಯೆಂದು ಮೇಲ್ದರ್ಜೆಗೇರಿಸಲಾಗಿದ್ದು ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ

ಬರುತ್ತದೆ. ಅನುದಾನದ ಲಭ್ಯತೆಗೆ ಅನುಗುಣವಾಗಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುತ್ತಿದೆ.

468 (664) ಶ್ರೀ ಸಿದ್ದು ಸಾವದಿ (ಜಮಖಂಡಿ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಯಾವುದೇ ಪರಿವರ್ತಕಗಳು ವಿಫಲವಾದಾಗ ರೈತರಿಗೆ ಪರ್ಯಾಯ ವ್ಯವಸ್ಥೆ ಮಾಡಲು ಕೈಗೊಳ್ಳುವ ಕ್ರಮಗಳೇನು; ಎಷ್ಟು ದಿವಸಗಳಲ್ಲಿ ದುರಸ್ತಿ ಮಾಡಿ ರೈತರಿಗೆ ಪೂರೈಸಲಾಗುವುದು;

ಆ) ನಿಯಮಾನುಸಾರ ತಕ್ಷಣ ಟಿ.ಸಿ.ಗಳನ್ನು ಪೂರೈಸದೆ ಹೋದರೆ ರೈತರ ಲಕ್ಷಾಂತರ ರೂ.ಗಳ ಬೆಳೆ ಹಾನಿ ಆಗುವುದು, ಇದಕ್ಕೆ ಯಾರು ಹೊಣೆ;

ಇ) ಓ.ವೈ.ಟಿ.ಯಲ್ಲಿ ಹಣ ಕಟ್ಟಿದ ರೈತರಿಗೆ ವಿದ್ಯುತ್ ಸಂಪರ್ಕ ಕೊಡಲು ಇರುವ ನಿಯಮಾವಳಿಗಳೇನು; ಎಷ್ಟು ದಿವಸಗಳಲ್ಲಿ ಸಂಪರ್ಕ ಕೊಡಲಾಗುವುದು;

ಈ) ಸದರಿ ಎರಡೂ ಕಾರ್ಯಗಳಲ್ಲಿ ಕರ್ತವ್ಯಲೋಪವೆಸಗಿ ರೈತರ ಬೆಳೆ ಹಾನಿಗೆ ಕಾರಣರಾಗುವ ಸಿಬ್ಬಂದಿ ಮೇಲೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಪರಿವರ್ತಕಗಳು ವಿಫಲಗೊಂಡಾಗ, ವಿಫಲಗೊಂಡ ಪರಿವರ್ತಕದಿಂದ ವಿದ್ಯುತ್ ಸರಬರಾಜು ಪಡೆಯುತ್ತಿದ್ದವರಿಗೆ ಸಾಮಾನ್ಯವಾಗಿ ಹತ್ತಿರದಲ್ಲಿರುವ ಬೇರೆ ಪರಿವರ್ತಕದಿಂದ ಪರ್ಯಾಯವಾಗಿ ವಿದ್ಯುತ್ ಸರಬರಾಜಿನ ವ್ಯವಸ್ಥೆ ಮಾಡಲಾಗುತ್ತದೆ. ವಿಫಲಗೊಂಡ ಪರಿವರ್ತಕವು ದುರಸ್ತಿಯಾಗುವವರೆಗೆ ಕಾಯದೇ, ಆದಷ್ಟು ಶೀಘ್ರಗತಿಯಲ್ಲಿ ಬೇರೆ ಪರಿವರ್ತಕದ ವ್ಯವಸ್ಥೆಯನ್ನು ಮಾಡಿ ವಿದ್ಯುತ್ ಪೂರೈಕೆ ಮಾಡಲಾಗುತ್ತದೆ.

ಆ) ವಿಫಲಗೊಳ್ಳುವ ಪರಿವರ್ತಕಗಳನ್ನು ಆದಷ್ಟು ಶೀಘ್ರವಾಗಿ ಬದಲಾಯಿಸಿ, ರೈತರ ಬೆಳೆಗಳಿಗೆ ಹಾನಿಯಾಗದಂತೆ ಕಾಳಜಿ ವಹಿಸಲಾಗುತ್ತದೆ.

ಇ) ಓವೈಟಿ ಯೋಜನೆಯು ಈಗ ಐಚ್ಛಿಕವಾಗಿದೆ. ಓವೈಟಿ ಯೋಜನೆಯಡಿಯಲ್ಲಿ ನೀರಾವರಿ ಪಂಪುಸೆಟ್ಟುಗಳ ವಿದ್ಯುತ್ ಸಂಪರ್ಕಕ್ಕಾಗಿ ಈ ಕೆಳಕಂಡ ನಿಯಮಾವಳಿಗಳನ್ನು ಅರ್ಜಿದಾರರು ಪಾಲಿಸಬೇಕಾಗಿದೆ.

1. ಸಂಬಂಧಪಟ್ಟ ಕಂದಾಯ/ನೀರಾವರಿ ಅಧಿಕಾರಿಗಳಿಂದ ಪಡೆದ ನೀರಿನ ಹಕ್ಕು ಪ್ರಮಾಣ ಪತ್ರ (Water right certificate) ದೊಂದಿಗೆ ಅರ್ಜಿ ನ್ಯೋಂದಾಯಿಸುವುದು.
2. ಓವೈಟಿ. ಯೋಜನೆಯಡಿ ಒದಗಿಸಲಾಗುವ ಟ್ರಾನ್ಸ್ ಫಾರ್ಮರ್ ಬಾಬ್ತು ರೂ.25,000/– ಮೊಬಲಗನ್ನು ಪಾವತಿಸುವುದು. ಒಂದು ವೇಳೆ ವಿದ್ಯುತ್ ಸಂಪರ್ಕ ಕಲ್ಪಿಸಲು ತಗುಲುವ ಅಂದಾಜು ಮೊತ್ತವು ರೂ. 1,25,000/– ಮಿತಿಯನ್ನು ಮೀರಿದಲ್ಲಿ, ವಾಸ್ತವ ಅಂದಾಜು ಮೊತ್ತ ಮತ್ತು ರೂ.1,25,000/– ಇವುಗಳ ವ್ಯತ್ಯಾಸದ ಹಣವನ್ನೂ ಸಹ ಓ.ವೈ.ಟಿ.